ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ    ದಿನಾಂಕ : DATE : 6/11/19

# ವಿಡಿಯೋ ಬಾಂಬ್ ಠುಸ್?

ವಿ.ವಾ. 6-11-19

## ಕಾಂಗ್ರೆಸ್‌ಗೆ ದೊಡ್ಡ ನಿರಾಸೆ । ಅನರ್ಹ ಶಾಸಕರ ನಿಟ್ಟುಸಿರು

ರಾಘವ ಶರ್ಮ ನಿಡ್ಲೆ ನವದೆಹಲಿ

ರಾಜ್ಯ ರಾಜಕಾರಣದಲ್ಲಿ ಕೋಲಾಹಲಕ್ಕೆ ಕಾರಣವಾಗಿರುವ ಸಿಎಂ ಯಡಿಯೂರಪ್ಪ ಅವರ ಹೇಳಿಕೆ ಒಳಗೊಂಡ ವೈರಲ್ ವಿಡಿಯೋ 'ಸಾಕ್ಷ್ಯ'ದ ಮೂಲಕ ಸುಪ್ರೀಂಕೋರ್ಟ್‌ನಲ್ಲಿ ನಡೆಯುತ್ತಿರುವ ಅನರ್ಹರ ಪ್ರಕರಣಕ್ಕೆ ರೋಚಕ ತಿರುವು ನೀಡಬೇಕೆಂದಿದ್ದ ಕಾಂಗ್ರೆಸ್ - ಜೆಡಿಎಸ್ ತಂತ್ರಕ್ಕೆ ಪೂರ್ಣಪ್ರಮಾಣದ ಫಲ ಸಿಕ್ಕಿಲ್ಲ. ಈ ಬೆಳವಣಿಗೆಯಲ್ಲಿ ದೊಡ್ಡ ಲೆಕ್ಕಾಚಾರವನ್ನೇ ಹಾಕಿದ್ದ



ಕಾಂಗ್ರೆಸ್‌ಗೆ ನಿರಾಸೆಯಾಗಿದೆ. ಈ ವಿಡಿಯೋ ದಾಖಲೆಯಿಂದ ತೀರ್ಪು ಅನರ್ಹರ ವಿರುದ್ಧವಾಗಿ ಬರಲಿದೆ ಎಂದೆಣಿಸಿದ್ದ ಕಾಂಗ್ರೆಸ್, ಇದನ್ನು ರಾಜಕೀಯವಾಗಿಯೂ ಬಳಸಿಕೊಂಡು ಬಿಜೆಪಿಯ ಬಣ್ಣ ಬಯಲು ಮಾಡುವ ಪ್ರಯತ್ನದಲ್ಲಿತ್ತು. ಆದರೆ, ಸುಪ್ರೀಂನ ನಡೆ ಕಾಂಗ್ರೆಸ್‌ನ ಆಶಾಭಾವನೆಗೆ ತಣ್ಣೀರೆರಚಿತು. ಆತಂಕದಲ್ಲಿದ್ದ ಅನರ್ಹ ಶಾಸಕರು ಈ ಬೆಳವಣಿಗೆಯಿಂದ ನಿರಾಳರಾದರೆ, ಏನೋ ಆಗಿಬಿಡಬಹುದೆಂದು ಮುಗುಮ್ಮಾಗಿದ್ದ ಬಿಜೆಪಿ ನಾಯಕರೂ ನಿಟ್ಟುಸಿರುಬಿಟ್ಟಿದ್ದಾರೆ.

ವಿಡಿಯೋ ಬಗ್ಗೆ ವಿಚಾರಣೆ ನಡೆಸಬೇಕೆಂಬ ಕಾಂಗ್ರೆಸ್-ಜೆಡಿಎಸ್ ಪರ ವಕೀಲರ ಅರ್ಜಿಯನ್ನು ಮಂಗಳವಾರ ಕೈಗೆತ್ತಿಕೊಂಡ ನ್ಯಾ. ಎನ್.ವಿ. ರಮಣ ನೇತೃತ್ವದ ತ್ರಿಸದಸ್ಯ ನ್ಯಾಯಪೀಠ, 'ಈ ಬಗ್ಗೆ ವಿಸ್ತೃತ ವಿಚಾರಣೆ ನಡೆಸಲು ಸಾಧ್ಯವಿಲ್ಲ. ನೀವು ಸಲ್ಲಿಸಿರುವ ಅರ್ಜಿ ಹಾಗೂ ಸಿ.ಡಿ. ನಮ್ಮ ಗಮನಕ್ಕೆ ಬಂದಿದೆ. ಅನರ್ಹರ ಪ್ರಕರಣದಲ್ಲಿ ತೀರ್ಪು ಪ್ರಕಟಿಸುವ ಮುನ್ನ ನಿಮ್ಮ ದಾಖಲೆ ಪರಿಶೀಲಿಸುತ್ತೇವೆ' ಎಂದು ಹೇಳಿತು. ಆದರೆ ಪ್ರಕರಣದಲ್ಲಿ ಬಿಎಸ್‌ವೈ ವಿಡಿಯೋವನ್ನು ಸಾಕ್ಷ್ಯವನ್ನಾಗಿ ಪರಿಗಣಿಸುವ ಅಥವಾ ಪರಿಗಣಿಸದಿರುವ ಬಗ್ಗೆ ಸುಪ್ರೀಂಕೋರ್ಟ್ ಯಾವುದೇ ಅಭಿಪ್ರಾಯ ಹೊರಹಾಕಲಿಲ್ಲ. 'ನಿಮ್ಮ ಬೇಡಿಕೆಯನ್ನು ಪರಿಶೀಲಿಸುತ್ತೇವೆ' ಎಂದಷ್ಟೇ ಹೇಳಿರುವುದರಿಂದ



- ವಿಚಾರಣೆಗೆ ಸುಪ್ರೀಂಕೋರ್ಟ್ ನಿರಾಸಕ್ತಿ
- ಸಾಕ್ಷ್ಯ ಪರಿಗಣನೆ ಇನ್ನೂ ಸಸ್ಪೆನ್ಸ್
- ಮತ್ತಷ್ಟು ಕುತೂಹಲದತ್ತ ಅನರ್ಹರ ಪ್ರಕರಣ
- ಕೊಂಚ ನಿರಾಳರಾದ ಬಿಜೆಪಿ ನಾಯಕರು

ಸಾಕ್ಷ್ಯದ ಪರಿಗಣನೆ ಕುರಿತ ಕುತೂಹಲ ಹಾಗೇ ಉಳಿದುಕೊಂಡಿದೆ.

ಮಂಗಳವಾರ ವಿಚಾರಣೆ ಆರಂಭವಾಗುತ್ತಿದ್ದಂತೆಯೇ ಕಾಂಗ್ರೆಸ್ ಪರ ವಕೀಲ ಸಿಬಲ್, ನಮ್ಮ ಈವರೆಗಿನ ವಾದಕ್ಕೆ ಪೂರಕವಾಗಿರುವ ಗಂಭೀರ ಸಾಕ್ಷ್ಯ ಸಿಕ್ಕಿದೆ ಎಂದು ನ್ಯಾಯಪೀಠದ ಮನವೊಲಿಸುವ ಯತ್ನ ಮಾಡಿದರು. ಆದರೆ ಈ ಬಗ್ಗೆ ಹೆಚ್ಚು ಆಸಕ್ತಿ ತೋರದ ನ್ಯಾಯಪೀಠ, 'ಇದೇ ಅಂಶಗಳನ್ನು ನೀವು ಹಿಂದಿನ ವಾದಗಳಲ್ಲಿ ಮಂಡಿಸಿದ್ದೀರಿ. ಮತ್ತೊಮ್ಮೆ ಅಂಥದ್ದೇ ಪ್ರತಿಪಾದನೆಯನ್ನು ಮಾಡುವುದರ ಪ್ರಸ್ತುತತೆ ಏನು? ಸ್ಪೀಕರ್ ಆದೇಶದಲ್ಲಿ ಇದೆಲ್ಲ ಚರ್ಚೆಯಾಗಿದೆಯಲ್ಲ? ಶಾಸಕರು ಹೇಗೆ ಮುಂಬೈಗೆ ಹೋದರು, ಅಲ್ಲಿ ಫೈವ್‌ಸ್ಟಾರ್ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದು ಸೇರಿ ಎಲ್ಲ ವಿಚಾರಗಳ ಬಗ್ಗೆ ನಾವು ನಿಮ್ಮ ಮುಂದೆಯೇ ಸಮಗ್ರ ವಿಚಾರಣೆ ಮಾಡಿದ್ದೇವೆ' ಎಂದು ತಿಳಿಸಿತು. ಪುಟ 3

### ಶುಕ್ರವಾರ ತೀರ್ಪು?

ರಾಜ್ಯದಲ್ಲಿ ಉಪಚುನಾವಣೆ ಘೋಷಣೆಯಾಗಿದ್ದು, ನ.11ರಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭಗೊಳ್ಳಲಿದೆ. ಮುಂದಿನ ಸೋಮವಾರ ಮತ್ತು ಮಂಗಳವಾರ ಸುಪ್ರೀಂಕೋರ್ಟ್‌ಗೆ ರಜೆ ಇರುವುದರಿಂದ ಇದೇ ಶುಕ್ರವಾರ ಅಥವಾ ಅದಕ್ಕೂ ಮುನ್ನ ಪ್ರಕರಣದ ಕುರಿತು ನ್ಯಾಯಪೀಠ ತೀರ್ಪು ನೀಡಬಹುದು ಎಂಬ ಚರ್ಚೆಗಳು ಕಾನೂನು ವಲಯದಲ್ಲಿ ಕೇಳಿಬಂದಿದೆ.

### ತಜ್ಞರು ಏನಂತಾರೆ

ಬಿಎಸ್‌ವೈ ಅವರದ್ದೆನ್ನಲಾದ ವಿಡಿಯೋವನ್ನು ಸುಪ್ರೀಂಕೋರ್ಟ್ ಗಂಭೀರವಾಗಿ ಪರಿಗಣಿಸಿದಂತೆ ಮೇಲ್ನೋಟಕ್ಕೆ ಕಾಣುತ್ತಿಲ್ಲ. ಏಕೆಂದರೆ, ಈ ವಿಡಿಯೋವನ್ನು ಪ್ರಕರಣದಲ್ಲಿ ಸಾಕ್ಷ್ಯ ಎನ್ನುವುದಿದ್ದರೆ ಅದರ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ಕೋರ್ಟ್ ಮುಂದಾಗುತ್ತಿತ್ತು. ಆದರೆ ಆಡಿಯೋ ಪರೀಕ್ಷೆ ಅಥವಾ ತನಿಖೆಗೆ ಕೋರ್ಟ್ ಆದೇಶ ನೀಡಲಿಲ್ಲ. ಮೇಲಾಗಿ, ಈ ವಿಡಿಯೋ ಯಡಿಯೂರಪ್ಪ-ಅನರ್ಹರಿಗೆ ಸಂಬಂಧಿಸಿದ್ದರಿಂದ ಅವರು ಪ್ರತಿವಾದಿಗಳಾಗುತ್ತಾರೆ. ಆದರೆ, ನ್ಯಾಯಾಲಯ ಅವರಿಗೆ ಕಾಂಗ್ರೆಸ್ ಆರೋಪಕ್ಕೆ ಉತ್ತರಿಸಿ ಎಂದು ನೋಟಿಸನ್ನೂ ನೀಡಿಲ್ಲ. ಹೀಗಾಗಿ, ಯಾವುದೇ ತನಿಖೆಯಿಲ್ಲದೆ ಇದನ್ನು ಮಹತ್ವದ ಸಾಕ್ಷ್ಯ ಎಂದು ಪರಿಗಣಿಸುವುದು ಕಷ್ಟ. 'ಆಡಿಯೋ ವಿವಾದಕ್ಕೆ ಸೀಮಿತ'ವಾಗಿ ನೋಡುವುದಾದರೆ ಬಿಎಸ್‌ವೈ ಮತ್ತು ಅನರ್ಹರಿಗೆ ಇದು ಸಣ್ಣಮಟ್ಟಿನ ರಿಲೀಫ್ ಎಂದು ಕಾನೂನು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

1

# ವಿಡಿಯೋ ಬಾಂಬ್ ಠುಸ್?

ಮೊದಲನೇ ಪುಟದಿಂದ.. 6/11/19

ಅದಕ್ಕೆ ಸುಮ್ಮನಾಗದ ಸಿಬಲ್, ಕೇಂದ್ರ ಗೃಹ ಸಚಿವರ ನಿರ್ದೇಶನದ ಮೇರೆಗೆ ಶಾಸಕರ ರಾಜೀನಾಮೆ ಪ್ರಕ್ರಿಯೆ ನಡೆಸಿದೆ ಎಂಬುದನ್ನು ಸಿಎಂ ಯಡಿಯೂರಪ್ಪನವರೇ ಬಿಜೆಪಿ ಸಭೆಯಲ್ಲಿ ಹೇಳುತ್ತಿದ್ದಾರೆ. ಇದು ಹೊಸ ಮತ್ತು ಮಹತ್ವದ ಬೆಳವಣಿಗೆ' ಎಂದು ವಾದಿಸಿದರು.

ಇತನ್ಮಧ್ಯೆ, ಕಾಂಗ್ರೆಸ್ ಅರ್ಜಿಗೆ ಆಕ್ಷೇಪ ವ್ಯಕ್ತಪಡಿಸಿದ ಅನರ್ಹರ ಪರ ವಕೀಲ ಆರ್ಯಮನ್ ಸುಂದರಂ, ವಿಡಿಯೋದಲ್ಲಿರುವ ಮಾತುಗಳು ತನ್ನದಲ್ಲ ಎಂದು ಬಿಎಸ್‌ವೈ ಹೇಳಿದ್ದಾರೆ. ಈ ಆಡಿಯೋಗೆ ಮಹತ್ವ ನೀಡಬಾರದು ಎಂದರು. 'ನೀವು (ಕಾಂಗ್ರೆಸ್ ಪರ ವಕೀಲರು) ಹೇಳುವ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿದರೆ ಪ್ರತಿವಾದಿಗಳಿಗೆ ನೋಟಿಸ್ ನೀಡಬೇಕಾಗುತ್ತದೆ ಮತ್ತು ಪ್ರಕ್ರಿಯೆ ಪೂರ್ಣಗೊಳ್ಳಲು ಇನ್ನಷ್ಟು ಸಮಯ ಬೇಕಾಗುತ್ತದೆ. ಇದರಿಂದ ತೀರ್ಪು ವಿಳಂಬವಾಗಲಿದೆ. ನೀವು ಹೇಳಬೇಕಾದುದ್ದನ್ನು ಅರ್ಜಿಯಲ್ಲಿ ಹೇಳಿದ್ದೀರಿ. ನಾವದನ್ನು ಪರಿಶೀಲಿಸಿ ಅಂತಿಮವಾಗಿ ತೀರ್ಪು ನೀಡುತ್ತೇವೆ ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು.